ಶಿವಮೊಗ್ಗ ಡಿಸ್ಟ್ರಿಕ್ಟ್.

ತಾರೀಖು 27ನೇ ಜೂ೯ 1884.

ಸಿಕಾರಿಪುರದಲ್ಲಿ ಹೊಸ ತಾಲ್ಲೂಕು ಕಚ್ಚೇರಿ ಕಟ್ಟಣವನ್ನು ಕಟ್ಟುವದಕ್ಕೆ ಮೈಸೂರು ಗವರ್ಮೆಂಟಿನಿಂದ ಮಂಜೂರಾಗಿರುತ್ತೇಯಾಗಿ ಸದರೀ ಕೆಲಸವನ್ನು ನೆರವೇರಿಸುವದಕ್ಕೆ ಇದರಿಂದ ದರಖಾಸ್ತು ಅಪೇಕ್ಷಿಸಲ್ಪಡುತ್ತೆ.

1. ತಾಲ್ಲೂಕು ಕಚ್ಚೇರಿಗೆ ಗೊತ್ತಾದ ನಮೂನೇ ಪ್ರಕಾರ ಕಟ್ಟಣವು ಕಟ್ಟಿಸಲ್ಪಡತಕ್ಕದ್ದು. ಮತ್ತು ಪುಮ್ಮೂರ್ 15,000 ರೂಪಾಯಿಗಳು ಲಾಗವಡು ಹಿಡಿಯತಕ್ಕದ್ದು.

2. ಪ್ರತಿ ದರಖಾಸ್ತಿನ ಸಂಗಡಲೂ 500 ರೂಪಾಯಿಗಳು ನಗದಾಗಿಯಾಗಲಿ ಅಥವಾ ಕರ್ಣಿಸಿ ನೋಟಿನ ಮೂಲಕವಾಗಿಯಾಗಲಿ ಮುಂಗಡ ತರೀಕ ಡಿಪಾಜಿಟ್ ಕಟ್ಟತಕ್ಕದ್ದು.

3. ಮಂಜೂರ್ಮಾಡಲ್ಪಟ್ಟ ದರಖಾಸ್ತುದಾರನು ಜಾಮೀನೀ ಹಾಜರ್ಮಾಡುವದಕ್ಕೂ ಮತ್ತು ಅವನ ದರಖಾಸ್ತು ಅಂಗೀಕರಿಸಲ್ಪಟ್ಟ ಸಂಗತಿ ಅವನಿಗೆ ತಿಳಿಸಲ್ಪಟ್ಟ ಹದಿನೈದು ದಿನಗಳೊಳಗಾಗಿ ಕಂಟ್ರಾಕ್ಟು ಮುಚ್ಚಲಿಕೆಯಹ್ನು ಬರೆದುಕೊಡುವದಕ್ಕೂ ಅಪೇಕ್ಷಿಸಲ್ಪಡುವನು ಇದಕ್ಕೆ ತಪ್ಪಿದರೆ ಮೇಲ್ಕಂಡ ಕಲಂನಲ್ಲಿ ನಮೂದಾದ 500 ರೂಪಾಯಿಗಳು ಡಿಪಾಜಿಟ್ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಟ್ಟು ಹೊಸ ದರಖಾಸ್ತು ಖಾಯಿಷ್ ಮಾಡಲ್ಪಡುವವು. ಮಂಜೂರ್ಮಾಡಲ್ಪಡದ ದರಖಾಸ್ತುದಾರರ ಡಿಪಾಜಿಟ್ ಮೊಬಲಗು ಕೂಡ್ಲೆ ವಾಪಸ್ ಮಾಡಲ್ಪಡುವದು.

4. ದರಖಾಸ್ತಿನಲ್ಲಿ ಕೆಲಸದ ಪ್ರತಿ ಬಾಬಿಗೂ ಖಾಯಿಷ್ ಮಾಡಿದ ದರ, ಪೂರಾ ಕೆಲಸವು ಪೂರೈಸುವ ಕಾಲ, ಯಾವ ತಪ್ಪಾಗಲಿ ಉಂಟಾದರೆ ಆ ಬಗ್ಯೆ ದಂಡ ಇಂತಾದ್ದನ್ನು ನಮೂದಿಸತಕ್ಕದ್ದು.

5. ದರಖಾಸ್ತು ಬಂದು ಮಾಡಲ್ಪಟ್ಟು "ಸಿಕಾರಿಪುರದಲ್ಲಿ ಹೊಸತಾಲ್ಲೂಕು ಕಚ್ಚೇರಿಯನ್ನು ಕಟ್ಟುವ ಬಗ್ಯೆ ದರಖಾಸ್ತು" ಯೆಂದು ವಿಲಾಸ ಬರಯಲ್ಪಟ್ಟು, ಶಿವಮೊಗ್ಗ ಡಿವೀರ್ಜ ಎಗ್ಜಿಕ್ಯೂಟಿವ್ ಇಂಜನಿಯರಿಗೆ ಕಳುಹಿಸಲ್ಪಡತಕ್ಕದ್ದು.

ಸ್ಯ 1884ನೇ ಜುಲ್ಯೆ 15ನೇ ಮತ್ತು ಮಿಗೆ ತರುವಾಯ ಯಾವ ದರಖಾಸ್ತೂ ತೆಗದುಕೊಳ್ಳಲ್ಪಡಲಾರದು.

6. ಇನ್ನೂ ಹೆಚ್ಚಿಗೇ ಸಂಗತಿಯೂ, ಸಬ್ ಹೆಡ್‌ಗಳ ಷೆಡ್ಯೂಲ್ ಪಟ್ಟಿಯೂ, ಇದರಡಿ ರುಜು ಮಾಡಿರುವವರಿಗೆ ದರಖಾಸ್ತು ಮಾಡಿ ಪಡಕೊಳ್ಳಬಹುದು.

7. ಇದರಡಿ ರುಜು ಮಾಡಿರುವವರು ಕಮ್ಮಿ ದರಖಾಸ್ತನ್ನಾಗಲಿ ಯಾವ ದರಖಾಸ್ತನ್ನಾಗಲಿ ಹಾಗೆ ಮಾಡಲಿಕ್ಕೆ ಯಾವ ಸಬಬನ್ನೂ ನಮೂದಿಸದೆ ಮಂಜೂರ್ಮಾಡತಕ್ಕ ಅಧಿಕಾರವನ್ನು ತಮ್ಮಲ್ಲಿಯೇ ಉಳಿಸಿಕೊಂಡಿರುತ್ತಾರೆ.

ಡಿ. ರಂಗರಾವ್,
ಫಾರ್ ಎಗ್ಜಿಕ್ಯೂಟಿವ್ ಇಂಜನಿಯರ್.

ಪ್ರಕಟನೆ.

ಮೈದಾ೯ ತಾಲ್ಲೂಕುಗಳಲ್ಲಿ, ಮೇಲ್ಪಟ್ಟ ಅಥವಾ ತಾಲ್ಲೂಕು ಪಾಠಶಾಲೆಗಳ ಬಗ್ಯೆ ಕೊಡಗು ವಿದ್ಯಾಭ್ಯಾಸದ ಇಲಾಖೇಗಾಗಿ ಇಬ್ಬರು ಹೆಡ್ ಮಾಸ್ಟರುಗಳು ಬೇಕಾಗಿರುವದರಿಂದ ಉಮೇದ್ವಾರರು ಕನ್ನಡ ಪದ್ಯವನ್ನೂ ವ್ಯಾಕರಣವನ್ನೂ ಚನ್ನಾಗಿ ತಿಳ್ದಿರತಕ್ಕದ್ದು, ಅವರುಗಳು ಇಂಗ್ಲೀಷನ್ನು ಶುದ್ಧಾಂಗ ತಿಳಿದಿರಬೇಕಾದ ಆವಶ್ಯಕವಿಲ್ಲವು, ಪರಂತು ಗಣಿತಶಾಸ್ತ್ರವೂ, ಭೂಗೋಳ ತಂತ್ರವೂ, ಇಂಗ್ಲಿಷ್‌ದ್ವಾರಾ ಕಲಿಸಲ್ಪಟ್ಟಿರುವ ಉಮೇದ್ವಾರರು ಚನಾಯಿಸಲ್ಪಡುವರು.

ಹಾಲೀ ತಲಬ್ 20 ರೂಪಾಯಿಗಳು ಕೊಡಲ್ಪಡುವದು, ವಯಸ್ಸು, ಜಾತಿ ಸ್ವದೇಶ, ಲಾಯಖೀಗಳು, ಟೀಚರಾಗಿದ್ದ ಪೂರ್ವದ ಅನುಭವ, ಮತ್ತು ಹಾಲೀ ಯಿರುವ ಕೆಲಸ ಈ ಮುಂತಾದ ತಪಸೀಲ್‌ಗಳ ಸಮೇತ ಇದರಡಿ ರುಜು ಮಾಡಿರುವವರ ಆಫೀಸಿಗೆ ದರಖಾಸ್ತು ಮಾಡತಕ್ಕದ್ದು.

ಇ. ಮಾರ್ಸ್ಡೆ,
ಕೊಡಗು ಸ್ಕೂಲ್‌ಗಳ ಇನ್‌ಸ್ಪೆಕ್ಟರ್.